## ಕಳೆದ ಸಂಚಿಕೆಯಲ್ಲಿ...



ಪಾಲ್‌ನ ಸ್ಕಾಟಿಶ್ ನೃತ್ಯ ಪ್ರದರ್ಶನ ನೀನಾಳನ್ನು ಮರುಳುಗೊಳಿಸಿತು. ಮೊದಲ ಭೇಟಿಯಲ್ಲೇ ನೀನಾಳ ಬಗ್ಗೆ ಪಾಲ್‌ಗೆ ಮಧುರ ಭಾವನೆ ಬೆಳೆಯಿತು. ಆ ಭಾವನೆಯೇ ಅಪ್ರತಿಮ ಸುಂದರಿಯಾದ ಅವಳನ್ನು ಹುಡುಕಿಕೊಂಡು ಹೋಗುವಂತಾಯಿತು. ಎಡಿನ್‌ಬರ್ಗ್‌ಗೆ ಬಂದಿದ್ದ ನೀನಾ ಹಾಗೂ ಅವಳ ಇಬ್ಬರು ಹೆಣ್ಣುಮಕ್ಕಳನ್ನು ಊರು ಸುತ್ತಿಸುವ ಕೆಲಸವನ್ನು ಪಾಲ್ ವಹಿಸಿಕೊಂಡ. ಆ ಸುತ್ತಾಟದಲ್ಲಿ, ನೀನಾ ಪರಿತ್ಯಕ್ತ ಮಹಿಳೆಯೆನ್ನುವುದು ಪಾಲ್‌ಗೆ ತಿಳಿಯಿತು. ಪಾಲ್ ಕೂಡ ಹೆಂಡತಿಯಿಂದ ದೂರಾಗಿದ್ದ. ಅವನಿಗೂ ಇಬ್ಬರು ಹೆಣ್ಣುಮಕ್ಕಳಿದ್ದರು. ಈ ಒಂಟಿತನ ಇಬ್ಬರನ್ನೂ ಆಪ್ತರನ್ನಾಗಿಸಿತು. ಸ್ನೇಹ ಪ್ರೇಮವಾಗಿ ಬದಲಾಗಲು ಹೆಚ್ಚು ಸಮಯ ಹಿಡಿಯಲಿಲ್ಲ. ನೀನಾಳನ್ನು ಹುಡುಕಿಕೊಂಡು ಡೆನ್ಮಾರ್ಕ್‌ನ ಕೋಪನ್‌ಹೇಗನ್‌ಗೆ ಹೋದ. ಅಲ್ಲಿ ಪ್ರೇಯಸಿಯಿಂದ ಆತ್ಮೀಯ ಸ್ವಾಗತ ದೊರೆಯಿತು. ಭಾರತೀಯ ಮೂಲದ ಅವಳ ತಂದೆತಾಯಿಯರೂ ಪಾಲ್‌ನನ್ನು ಆದರದಿಂದ ಕಂಡರು. ನೀನಾಳ ಜೊತೆಗಿನ ಸಂಬಂಧ ದೀರ್ಘ ಕಾಲ ಬಾಳುವುದೆನ್ನುವುದು ಪಾಲ್‌ಗೆ ಮನದಟ್ಟಾಯಿತು.

'ನೀವು ಹೇಳಿದ್ದು ಸರಿ, ನಾನು ತುಂಬಾ ಸರಳ–ಸಾಮಾನ್ಯ ವ್ಯಕ್ತಿ'.

'ಏನು ತೆಗೆದುಕೊಳ್ಳೀರ?' ನೀನಾಳ ತಾಯಿ ನನ್ನನ್ನು ಪ್ರೀತಿಯಿಂದ ಕೇಳಿದರು.

'ನಾನು ಮದ್ಯವನ್ನು ಹೊರತುಪಡಿಸಿ ಬೇರೆಲ್ಲವನ್ನೂ ಕುಡೀತೀನಿ' ಎಂದೆ.

'ಕಾಫಿ?' ನೀನಾಳ ತಾಯಿ ಶೀಲಾ ದೇವಿ ಕೂಡಲೇ ನನ್ನನ್ನು ಕೇಳಿದರು.

'ಕಾಫಿಯೇ ಸರಿ'.

ಸ್ವಲ್ಪ ಹೊತ್ತಿನ ನಂತರ ಶೀಲಾ ದೇವಿಯವರು ಕಾಫಿ ಮತ್ತು ಸ್ನ್ಯಾಕ್ಸ್‌ನೊಂದಿಗೆ ಬಂದು ನನ್ನೆದುರಿಗಿಟ್ಟರು. ಅವರು ಮನೆಯಲ್ಲಿಯೇ ಆ ಸ್ನ್ಯಾಕ್ಸ್‌ಗಳನ್ನು ತಯಾರಿಸಿದ್ದರು. ನನಗೆಲ್ಲವನ್ನೂ ತಿನ್ನುವ ಅಭ್ಯಾಸವಿತ್ತು. ಹೀಗಾಗಿ ದಕ್ಷಿಣ ಭಾರತ ಶೈಲಿಯ ಕಾಫಿಯೊಂದಿಗೆ ದಕ್ಷಿಣ ಭಾರತದ ಸ್ನ್ಯಾಕ್ಸ್‌ಗಳನ್ನು ತಿಂದು ಸಂತಸಪಟ್ಟೆ. ಡಾಕ್ಟರ್ ಶ್ರೀನಿವಾಸನ್ ತಮ್ಮ ಮದ್ಯವನ್ನು ಗುಟುಕರಿಸುತ್ತಿದ್ದರು.

ಸ್ವಲ್ಪ ಹೊತ್ತಿನ ನಂತರ ಮದ್ಯದ ಅಮಲಿನಲ್ಲಿ ಡಾಕ್ಟರ್ ಶ್ರೀನಿವಾಸನ್ ಹೇಳಿದರು, 'ನೀನಾ ನಮ್ಮ ಭಾರತೀಯ ಸಂಸ್ಕೃತಿಯಿಂದ ಸಾಕಷ್ಟು ದೂರವಾಗಿದ್ದಾಳೆ. ಆದರೆ ಅವಳು ಹೆಚ್ಚು ಬಾಯ್‌ಫ್ರೆಂಡ್ಸ್‌ಗಳನ್ನು ಮಾಡಿಕೊಳ್ಳಲಿಲ್ಲ. ನೀವು ಅವಳ ಎರಡನೆಯ ಬಾಯ್‌ಫ್ರೆಂಡ್ ಆಗಿದ್ದೀರ. ನೀನಾಗೆ ಮೂವತ್ತಮೂರು ವರ್ಷ, ಈ ಮೂವತ್ತಮೂರು ವರ್ಷಗಳಲ್ಲಿ ಇಬ್ಬರು ಬಾಯ್‌ಫ್ರೆಂಡ್ಸ್‌ಗಳು ಹೆಚ್ಚಲ್ಲ. ಅವನು ಡೆನಿಶ್, ಇಂಡಿಯನ್ ಅಲ್ಲ. ಅವನು ಯೂರೋಪಿಯನ್ ಆಗಿದ್ದು, ಈ.ಯೂ. (ಯೂರೋಪಿಯನ್ ಯೂನಿಯನ್) ನಾಗರಿಕ. ನಾವು ಅವನಿಂದ ಭಾರತೀಯ ಪದ್ಧತಿಯನ್ನು ಅಪೇಕ್ಷಿಸಲು ಸಾಧ್ಯವಿಲ್ಲ.'

ನಾನು ಕಹಿಯಾಗಿ ಮುಗುಳ್ನಗುತ್ತಾ ಯೋಚಿಸಿದೆ, ಯೂರೋಪಿಯನ್ ಹುಡುಗಿಯರು ಸಹ ಐದಾರು ತಿಂಗಳ ರಿಲೇಶನ್‌ಶಿಪ್‌ನಲ್ಲಿ, ಕಾಲೇಜು ಲೈಫಿನ ಸಮಯದಲ್ಲಿ ಗರ್ಭಿಣಿಯಾಗುವುದಿಲ್ಲ. ನೀನಾ ತನ್ನ ಭಾರತದ ಪರಂಪರೆಯನ್ನು ಸಂಪೂರ್ಣವಾಗಿ ಅಪಹಾಸ್ಯ ಮಾಡಿದ್ದಾಳೆ. ಅವಳ ತಾಯಿ ಶೀಲಾ ದೇವಿ ತಮ್ಮ ಪಾರಂಪರಿಕ ಉಡುಪಿನಲ್ಲಿದ್ದು, ಸೀರೆ ಧರಿಸಿ, ಹಣೆಗೆ ಕುಂಕುಮವಿಟ್ಟುಕೊಂಡು, ಕೊರಳಿಗೆ ಮಂಗಳಸೂತ್ರ ಹಾಕಿಕೊಳ್ಳುತ್ತಾರೆ. ಆದರೆ ನೀನಾ... ಇರಲಿ, ತಮ್ಮ ಮಗಳ ಅದ್ಭುತ ಕೆಲಸದಿಂದ ರಾಮಚಂದ್ರ ಶ್ರೀನಿವಾಸರ ಮನಸ್ಸು ನೊಂದಿದೆ ಎಂಬ ವಿಷಯ ಇಷ್ಟು ವರ್ಷಗಳಾದ ನಂತರವೂ ಅವರಲ್ಲಿದೆ ಎಂಬುದನ್ನು ನಾನು ಮನಗಂಡೆ.

ಆದರೆ ನನಗೆ ನೀನಾಳ ಹಿಂದಿನ ಜೀವನದಿಂದ ಏನಾಗಬೇಕಿದೆ! ನನ್ನ ಜೀವನವಾದರೂ ಎಷ್ಟು ಪರಿಶುದ್ಧವಾಗಿದೆ?

ರಾಮಚಂದ್ರ ಶ್ರೀನಿವಾಸನ್ ಮತ್ತು ಶೀಲಾ ದೇವಿಯವರೊಂದಿಗಿನ ಎರಡನೆಯ ಭೇಟಿಯಲ್ಲಿ ಅವರು ನನ್ನ ಇದುವರೆಗಿನ ಜೀವನದ ಬಗ್ಗೆ ವಿಚಾರಿಸಿದರು. ಹಿಂದಿನ ಪತ್ನಿಯಿಂದ ವಿಚ್ಛೇದನ ಆಗಿದ್ದು ಯಾವಾಗ? ನಾನು ನನ್ನ ಮಕ್ಕಳೊಂದಿಗೆ ಎಷ್ಟು ಬೆರೆಯುತ್ತೇನೆ? ಮಕ್ಕಳ ಪಾಲನೆ ಪೋಷಣೆಯಲ್ಲಿ ನನ್ನ ಭೂಮಿಕೆ ಏನು? ಎಂದೆಲ್ಲಾ ಪ್ರಶ್ನೆಗಳನ್ನು ಕೇಳಲಾಯಿತು.

ನಾನು ಸೌಂದ್ರಾಳಿಗೂ ಹಿಂದೆ ಮತ್ತು ನಂತರ ಭೇಟಿಯಾದ ಮಹಿಳೆಯರು ಮತ್ತು ಅವರೊಂದಿಗಿನ ತುಚ್ಛ ಮತ್ತು ಅಲ್ಪಕಾಲದ ಸಂಬಂಧಗಳ ಬಗ್ಗೆ ಹೇಳುವುದು ಅವಶ್ಯಕವೆಂದು ತಿಳಿಯಲಿಲ್ಲ. ಹೀಗಾಗಿ ನಾನು ಸೌಂದ್ರಾಳ ವಿಷಯವನ್ನಷ್ಟೇ ಪ್ರಸ್ತಾಪಿಸುತ್ತಾ, ಅವಳು ನನ್ನ ಲಂಡನ್ ಪ್ರಯಾಣದ ವೇಳೆಯಲ್ಲಿ ಒಂದು ರೈಲಿನಲ್ಲಿ ಭೇಟಿಯಾಗಿದ್ದಳು, ನಂತರ ನಾವು ವಿವಾಹವಾದೆವು ಎಂದು ಹೇಳಿದೆ. ವಿವಾಹದ ನಂತರ ಮೂರು ವರ್ಷ ನಾವು ಒಟ್ಟಿಗೆ ಇದ್ದೆವು. ಈ ಅವಧಿಯಲ್ಲಿ ನಮಗೆ ಲೂಸಿ ಮತ್ತು ಗ್ರೇಸಿ ಅವಳಿ ಮಕ್ಕಳು ಹುಟ್ಟಿದರು. ನನ್ನಿಂದ ವಿಚ್ಛೇದನ ಪಡೆದ ನಂತರ ಸೌಂದ್ರಾ ಮತ್ತೆ ವಿವಾಹ ಮಾಡಿಕೊಂಡಳು. ಈಗ ಅವಳಿಗೆ ಮೂರು ವರ್ಷದ ಮಗನಿದ್ದಾನೆ ಎಂಬುದನ್ನೂ ಹೇಳಿದೆ.

'ನಿನ್ನ ಪುತ್ರಿಯರು ತಮ್ಮ ತಾಯಿ ಮತ್ತು ಮಲ ತಂದೆಯೊಂದಿಗಿದ್ದಾರೆಯೇ?' ರಾಮಚಂದ್ರರು ಕೇಳಿದರು.

ನಾನು ಹೌದೆಂದು ತಲೆಯಾಡಿಸುತ್ತಾ ಹೇಳಿದೆ, 'ಆದರೆ ಅವರು ನನ್ನ ಬಳಿಗೆ ಬರುತ್ತಿರುತ್ತಾರೆ. ತಮ್ಮ ಶಾಲೆಯ ರಜಾ ದಿನಗಳಲ್ಲಿ ಅವರು ನನ್ನ ಮನೆಗೆ ಬರುತ್ತಾರೆ. ನಾನು ಅವರೊಂದಿಗೆ ಸಾಕಷ್ಟು ಸಮಯವನ್ನು ಕಳೆಯುತ್ತೇನೆ.'

ಆದರೆ ನೀವು ನೀನಾಳೊಂದಿಗೆ ವಿವಾಹ ಮಾಡಿಕೊಂಡ ನಂತರ ಇಲ್ಲಿ ಕೋಪನ್‌ಹೇಗನ್‌ಗೆ ಬರುತ್ತೀರ, ಆಗ ನೀವು ಭೌಗೋಳಿಕವಾಗಿ ಸಾಕಷ್ಟು ದೂರವಾಗುತ್ತೀರ. ನಿಮ್ಮ ಪುತ್ರಿಯರೊಂದಿಗೆ ಹಿಂದಿನಂತೆ ಭೇಟಿಯಾಗಲಾರಿರಿ...'

ನನಗೆ ರಾಮಚಂದ್ರರಿಂದ ಇಂಥ ನೇರ ಪ್ರಶ್ನೆಯ ನಿರೀಕ್ಷೆಯಿರಲಿಲ್ಲ. ನಿಜ ಹೇಳಬೇಕೆಂದರೆ, ನಾನಿನ್ನೂ ಈ ಬಗ್ಗೆ ಏನೂ ಯೋಚಿಸಿಯೇ ಇರಲಿಲ್ಲ.

'ನೀವು ಮತ್ತು ನೀನಾ ಒಬ್ಬರು ಇನ್ನೊಬ್ಬರ ಬಗ್ಗೆ ಸೀರಿಯಸ್ ಆಗಿ ಯೋಚಿಸಿದ್ದೀರ?' ಅವರು ಇದ್ದಕ್ಕಿದ್ದಂತೆ ಕೇಳಿದರು, 'ಇದೊಂದು ದೊಡ್ಡ ತೀರ್ಮಾನ. ನೀವಿಬ್ಬರೂ ತುಂಬಾ ಯೋಚನೆ ಮಾಡಿ ಹೆಜ್ಜೆಗಳನ್ನಿಡಬೇಕು.'

'ಹೂಂ, ನಾನು ಸೀರಿಯಸ್ ಆಗಿದ್ದೇನೆ' ನೀನಾ ಕೂಡಲೇ ನನ್ನನ್ನು ನೋಡುತ್ತಾ ಹೇಳಿದಳು.

'ನಾನೂ ಸೀರಿಯಸ್ ಆಗಿದ್ದೇನೆ' ನಾನೂ ಹೇಳಿದೆ.

'ಹಾಗಾದರೆ ನೀವು ಕೆಲವು ಮಗ್ಗುಲುಗಳ ಬಗ್ಗೆ ಚಿಂತನೆ ಮಾಡಬೇಕಾಗುವುದು. ಉದಾಹರಣೆಗೆ, ನೀವಿಬ್ಬರು ಬೇರೆ ಬೇರೆ ದೇಶದವರು. ನಿಮ್ಮ ಶೈಕ್ಷಣಿಕ ಬಿರುದುಗಳು ಮತ್ತು ಕರಿಯರ್‌ನಲ್ಲೂ ಸಮಾನತೆಗಳಿಲ್ಲ. ನೀನಾ ಎಂಜಿನಿಯರ್, ಆದರೆ ಪಾಲ್ ನೀವು...?'

'ನಾನೊಬ್ಬ ಸಾಮಾನ್ಯ ಶಾಲಾ ಅಧ್ಯಾಪಕ' ನಾನು ಕಹಿಯಾಗಿ ಅವರ ವಾಕ್ಯವನ್ನು ಪೂರ್ಣಗೊಳಿಸಿದೆ.

ನೀನಾ ಕಳವಳಗೊಂಡಳು. ಆದರೆ ಡಾಕ್ಟರ್ ರಾಮಚಂದ್ರರು ನನ್ನ ಮಾತನ್ನು ಸಹಜವಾಗಿ ತೆಗೆದುಕೊಂಡು ನಮ್ಮಿಬ್ಬರಿಗೂ ಸಹಜವಾಗಿ ಹೇಳಿದರು, 'ಇದರಿಂದ ನಿಮ್ಮ ಸಂಬಂಧದ ಮೇಲೆ ಪ್ರಭಾವ ಬೀಳುವುದಿಲ್ಲವೇ?'

ನಾನು ಹೇಳುವುದಕ್ಕೂ ಮೊದಲೇ ನೀನಾ ಹೇಳಿದಳು, 'ಇಲ್ಲ, ಸ್ವಲ್ಪವೂ ಬೀಳಲ್ಲ. ನಾನು ಪಾಲ್‌ರೊಂದಿಗೆ ಸಹಜತೆಯನ್ನು ಮನಗಾಣುತ್ತೇನೆ. ನನಗೆ ಪಾಲ್‌ರ ಜೊತೆ ತುಂಬಾ ಸಂತೋಷವನ್ನು ಕೊಡುತ್ತದೆ.'

ನಾನು ಮುಗುಳ್ನಕ್ಕು ನೀನಾಳಿಗೆ ಹೇಳಿದೆ,